**ದಿಃ 13.04.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ- ಎದುರುದಾರರ ಪರ ಶ್ರೀ.ಬಿ.ಎನ್.ಜಿ. ವಕೀಲರಿಂದಃ-**

3. ನಾನು ಆಟೋ ಮೊಬೈಲಿನಲ್ಲಿ ಡಿಪ್ಲೋಮಾ ಮಾಡಿರುತ್ತೇನೆ. ನನಗೆ ಟೈರ್ ಶಾಪ್ ಮತ್ತು Used Cars Shop ಇರುತ್ತವೆ. 1 ನೇ ಪ್ರತಿವಾದಿ ನನ್ನ ದಾಯಾದಿ. ಪ್ರತಿವಾದಿಯ ತಂದೆಯ ಹೆಸರು ಸಿ.ಹೆಚ್.ಬಸಪ್ಪ ನಾಯಕ್ ಎಂದು. ತಾಯಿಯ ಹೆಸರು ಗಂಗಮ್ಮ ಎಂದು. ಪ್ರತಿವಾದಿಯ ತಂಗಿಯ ಹೆಸರು ಡಾ.ಸಿ.ಬಿ.ಲೀಲಾವತಿ ಎಂದು. ನನ್ನ ತಂದೆಯ ಹೆಸರು ಸಿ.ರಾಮಪ್ಪ ಎಂದು. ನನ್ನ ತಂದೆ ಬಸಪ್ಪ ನಾಯಕ್ ರವರ ತಮ್ಮ. ಗಂಗಮ್ಮ 1944 ರಲ್ಲಿ ಮೃತ ಪಟ್ಟಿರುತ್ತಾರೆ ಎನ್ನುವುದು ಸರಿ. ನಂತರ ನನ್ನ ದೊಡ್ಡಪ್ಪ ಬಸಪ್ಪ ನಾಯಕ್ ಮೃತ ಪಟ್ಟರು. ನನ್ನ ದೊಡ್ಡಪ್ಪನಿಗೆ ಪ್ರತಿವಾದಿ ಮತ್ತು ಸಿ.ಬಿ.ಲೀಲಾವತಿ ಇಬ್ಬರೇ ಮಕ್ಕಳು ಎನ್ನುವುದು ಸರಿ. ಸಿ.ಬಿ.ಲೀಲಾವತಿರವರು ತಮ್ಮ ಪೂರ್ತಿ ವಿದ್ಯಾಭ್ಯಾಸವನ್ನೆಲ್ಲಾ ಕನ್ನಡದಲ್ಲೇ ಮಾಡಿರುತ್ತಾರೆ ಎನ್ನುವುದು ಸರಿ. ಕನ್ನಡದಲ್ಲೇ ಆಕೆ ಡಾಕ್ಟರೇಟ್ ಪಡೆದಿದ್ದಾರೆ ಎನ್ನುವುದು ಸರಿ. ಅವರು ಸಹಜವಾಗಿ ಎಲ್ಲರೊಂದಿಗೂ ಕನ್ನಡದಲ್ಲೇ ಮಾತನಾಡುತ್ತಾರೆ ಎನ್ನುವುದು ಸರಿ. ಅವರ ಗಂಡನ ಹೆಸರು ಕೆ.ಸಿ.ಹನುಮಪ್ಪ ಬಿನ್ ಲೇ.ಚಿತ್ರಪ್ಪ ಎಂದು. ಲೀಲಾವತಿಯ ಮಗನ ಹೆಸರು ಕೆ.ಹೆಚ್.ಪ್ರವೀಣ್ ಎಂದು. ಆತ ಮೃತ ಪಟ್ಟಿರುತ್ತಾರೆ. ಲೀಲಾವತಿಯವರ ಗಂಡ ಸಹ ದಿಃ12.03.1978 ರಂದು ಮೃತ ಪಟ್ಟಿರುತ್ತಾರೆ. ಪ್ರತಿವಾದಿ ಜನರಲ್ ಸರ್ಜನ್ ಆಗಿರುತ್ತಾರೆ. ಮೈಸೂರಿನಲ್ಲಿ ಇದ್ದಂತಹ ಬಸಪ್ಪ ಮೆಮೋರಿಯಲ್ ಆಸ್ಪತ್ರೆಯನ್ನು ಅವರೇ ನಡೆಸುತ್ತಿದ್ದರು ಎನ್ನುವುದು ಸರಿ. ಪ್ರತಿವಾದಿಯ ಹೆಂಡತಿ ಹೆಸರು ನಳಿನಾ ಮೂರ್ತಿ. ಅವರ ಮಗನ ಹೆಸರು ಡಾ.ಪ್ರಬುದ್ಧ ಹರ್ಷ ಎಂದು. ಇನ್ನೊಬ್ಬ ಮಗನ ಹೆಸರು ಪ್ರಮೋದ್ ಎಂದು. ಮಗಳ ಹೆಸರು ಡಾ.ರಶ್ಮಿ ಎಂದು.

4. ಪ್ರತಿವಾದಿ, ಮೊದಲು ತಮ್ಮ ಕುಟುಂಬದೊಂದಿಗೆ ನಂ.9, ಪರಮಹಂಸ ರಸ್ತೆ, 3 ನೇ ಮುಖ್ಯರಸ್ತೆ, ಯಾದವಗಿರಿ, ಮೈಸೂರಿನಲ್ಲಿ ವಾಸ ಮಾಡುತ್ತಿದ್ದರು ಎನ್ನುವುದು ಸರಿ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಆಗ ನಮ್ಮದು ಒಟ್ಟು ಕುಟುಂಬವಾಗಿತ್ತು, ನಾನು ಸಹ ಅಲ್ಲಿಯೇ ಇದ್ದು, ವಿದ್ಯಾಭ್ಯಾಸ ಮಾಡಿರುತ್ತೇನೆ ಎನ್ನುತ್ತಾರೆ. ಅದು ಪ್ರತಿವಾದಿಯ ಸ್ವಂತ ಮನೆಯಾಗಿತ್ತು ಎನ್ನುವುದು ಸರಿ. ಅದು ಒಟ್ಟು ಕುಟುಂಬದ ಮನೆಯಾಗಿರಲಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಆ ಮನೆ ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು, ನಂತರ ಪ್ರತಿವಾದಿ ಅವರ ಹೆಸರಿಗೆ ಮಾಡಿಸಿಕೊಂಡರು ಎಂದು. ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಈ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಿಲ್ಲ. ಈ ವಿಷಯವನ್ನು ದಾವಾ ಪತ್ರದಲ್ಲಿ ತಿಳಿಸಿರುವುದಿಲ್ಲ ಎನ್ನುವುದು ಸರಿ ಮತ್ತು

ಹಿಂದಿನ ಅರ್ಜಿಗಳಲ್ಲಿಯೂ ಸಹ ತಿಳಿಸಿರುವುದಿಲ್ಲ ಎನ್ನುವುದು ಸರಿ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು